ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 490/2018**

**ಫ್ರಾಸಾ- 2 ಚಾಸಾ- 2**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಜಿ ಎನ್ ಶ್ರೀಧರ್ |
| ತಂದೆಯ ಹೆಸರುಃ | : | ಲೇಟ್ ಜಿ ಎನ್ ನರಹರಿ |
| ವಯಸ್ಸುಃ | : | 55 ವರ್ಷ |
| ಉದ್ಯೋಗಃ | : | ಆಫೀಸರ್ ಡಿಸ್ಟ್ರಿಕ್ಟ್ ಮಲೇರಿಯಾ ಆಫೀಸ್ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 25-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿಃ30-6-2014ರಿಂದ 25-7-2018ರವರೆಗೆ ನಾನು ಹಾಸನ ಡಿ ಹೆಚ್ ಒ ಕಛೇರಿಯಲ್ಲಿ ಪ್ರ.ದ.ಸ. ಆಗಿ ಕೆಲಸ ಮಾಡಿರುತ್ತೇನೆ.

2.ದಿನಾಂಕ 13-3-2017ರಂದು ನನ್ನ ಮೇಲಧಿಕಾರಿಗಳಾದ ಡಿಹೆಚ್ ಒ ರವರ ಸೂಚನೆಯಂತೆ ಹಾಸನ ಲೋಕಾಯುಕ್ತ ಪೊಲೀಸ್ ಕಛೇರಿಗೆ ಹೋಗಿರುತ್ತೇನೆ. ನನ್ನ ಜೊತೆ ಡಿಹೆಚ್ ಒ ಕಛೇರಿಯ ಸಹಾಯಕಾರಾದ ಶೋಭ ಎಂಬುವವರು ಕೂಡ ಬಂದಿದ್ದರು ನಾವು ಅಲ್ಲಿಗೆ ಹೋದಾಗ ಚಾಸಾ-23ರವರು ಹಾಗೂ ಅವರ ಸಿಬ್ಬಂದಿಗಳು ಮತ್ತು ದೂರುದಾರರಾದ ನೀತು ಎಂಬುವವರು ಇದ್ದರು. ತನಿಖಾಧಿಕಾರಿಯು ತಮ್ಮ ಮತ್ತು ದೂರುದಾರರ ಪರಿಚಯವನ್ನು ನಮಗೆ ಮಾಡಿಕೊಟ್ಟರು. ದೂರುದಾರರು ಏತಕ್ಕೆ ಠಾಣೆಗೆ ಬಂದಿರುತ್ತಾರೆ ಎಂಬ ವಿಚಾರವನ್ನು ತನಿಖಾಧಿಕಾರಿ ನಮಗೆ ತಿಳಿಸಿದರು. ದೂರುದಾರರು ತಾನುಯಾವ

ಕಾರಣಕ್ಕೋಸ್ಕರ ದೂರುಕೊಡಲು ಬಂದಿರುವುದಾಗಿ ಹೇಳಿದರು. ದೂರಿನ ವಿವರವನ್ನು ನಾವು ನೋಡಿದೆವು. ಅದು ನಿಜವಾ ಎಂದು ಕೇಳಿದೆವು.ಅವರು ಹೌದು ಎಂದು ಹೇಳಿದರು. ಅದಕ್ಕೆ ಪೂರಕವಾಗಿ ಮೊಬೈಲ್ ಸಂಭಾಷಣೆಯನ್ನು ಅವರು ತೋರಿಸಿದರು. ತನಿಖಾಧಿಕಾರಿಗಳು ಈ ಪ್ರಕರಣದಲ್ಲಿ ಒಬ್ಬರನ್ನು ಟ್ರ್ಯಾಪ್ ಮಾಡುತ್ತಿದ್ದೇವೆ ಅದಕ್ಕೆ ಪಂಚರಾಗಿ ಸಹಕರಿಸಬೇಕಾಗಿ ಕೋರಿಕೊಂಡರು, ಅದಕ್ಕೆ ನಾವು ಒಪ್ಪಿಕೊಂಡೆವು. ದೂರುದಾರರು ಲಂಚದ ಹಣದ ಬಾಪ್ತು 5000ರೂಪಾಯಿ ಹಣವನ್ನು ತಂದಿದ್ದರು. ಅವರು ಅದನ್ನು ತನಿಖಾಧಿಕಾರಿಗೆ ಕೊಟ್ಟರು. ತನಿಖಾಧಿಕಾರಿಯು ಅದನ್ನು ಚಾಸಾ-3ರವರಿಗೆ ಕೊಟ್ಟರು. ಅದರ ಕ್ರಮ ಸಂಖ್ಯೆಯನ್ನು ಎಣಿಸಿ ಹೇಳುವಂತೆ ಮತ್ತು ನನಗೆ ಅದನ್ನು ಬರೆದುಕೊಳ್ಳುವಂತೆ ಹೇಳಿದರು. ಅದರಂತೆ ಶೋಭಾರವರು ಅದರ ಕ್ರಮಸಂಖ್ಯೆಯನ್ನು ಓದಿ ಹೇಳಿದಂತೆ ನಾನು ಅದನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡೆನು. ಅದನ್ನು ಈಗ ನೋಡುತ್ತಿದ್ದು ನಿಪಿ-4 ಎಂದು ಸಾಕ್ಷಿಯ ರುಜುವನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಅವುಗಳಲ್ಲಿ 500ರೂ ಮುಖಬೆಲೆಯ ಒಟ್ಟು ಹತ್ತು ನೋಟುಗಳು ಇದ್ದವು.

(ಈ ಹಂತದಲ್ಲಿ ಸಾಕ್ಷಿಯು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿದ ಕಾರಣ ಕಾಲಾವಕಾಶ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**